ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.

ಸಿ.ಸಿ.ಃ 260/2018

ಪಿ. ಡಬ್ಲ್ಯುಃ 01

ಸಿ. ಡಬ್ಲ್ಯುಃ 01

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಪುಟ್ಟೇಗೌಡ |
| ತಂದೆ/ಪತಿಯ ಹೆಸರು | ಃ | ಮರೀಗೌಡ |
| ವಯಸ್ಸು | ಃ | 65 ವರ್ಷ |
| ವೃತ್ತಿ | ಃ | ವ್ಯವಸಾಯ |
| ವಾಸ | ಃ | ಬನ್ನಹಳ್ಳಿ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ

29.12.2021

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ಆರೋಪಿತರು ಗೊತ್ತು. ದಿಃ 02.02.2018 ರಂದು ಬೆಳಿಗ್ಗೆ 09.30-10.00 ಗಂಟೆ ಸಮಯದಲ್ಲಿ ಪಿ.ಹಳ್ಳಿಗೆ ಹೋಗುವ ರಸ್ತೆಯಲ್ಲಿರುವ ಸ.ನಂ.11/2 ರ ಜಮೀನಿನಲ್ಲಿ ಜಮೀನಿನ ವಿಚಾರಕ್ಕೆ ಸಂಬಂಧಿಸಿದಂತೆ ನಮ್ಮ ಮತ್ತು ಆರೋಪಿತರ ನಡುವೆ ಗಲಾಟೆಯಾಗಿತ್ತು. 1 ನೇ ಆರೋಪಿತ ನಾಗರಾಜು ನನ್ನ ಎಡಮೊಣಗೈ ಗೆ ಹಾಗೂ ಕಾಲಿನ ಹೆಬ್ಬೆಟ್ಟಿಗೆ ದೊಣ್ಣೆಯಿಂದ ಹೊಡೆದಿರುತ್ತಾರೆ. ನಾನು ಕೆಳಗೆ ಬಿದ್ದ ಮೇಲೆ ನಾಗರಾಜು ತನ್ನ ಕಾಲಿನಿಂದ ತನ್ನ ಹೊಟ್ಟೆಯ ಮೇಲೆ ಒದ್ದಿರುತ್ತಾನೆ. ಆರೋಪಿ ಲಕ್ಷ್ಮಿ ನನ್ನ ಮುಖಕ್ಕೆ ತಿವಿದಿರುತ್ತಾಳೆ. ಆ ಸಮಯದಲ್ಲಿ ನಮ್ಮೂರಿನ ಶಂಕರ್ ಸಹ ಅಲ್ಲಿ ಇದ್ದು ಜಗಳ ಬಿಡಿಸಿರುತ್ತಾರೆ. ಅದೇ ದಿನ ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ನನ್ನ ಮಗನ ಜೊತೆ ಸ್ಕೂಟರ್ ನಲ್ಲಿ ಚಿಕಿತ್ಸೆ ಗಾಗಿ ಮಂಡ್ಯದ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಂತರ ಸಂಜೆ 06.00 ಗಂಟೆ ಸಮಯಕ್ಕೆ ಅರಕೆರೆ ಪೋಲೀಸ್ ಠಾಣೆಗೆ ಹೋಗಿ ನಾನು ದೂರನ್ನು ನೀಡಿರುತ್ತೇನೆ.

ನಂತರ ಮರುದಿನ ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಪೋಲೀಸರು ಗ್ರಾಮಕ್ಕೆ ಬಂದಿದ್ದು ನಾನು ತೋರಿಸಿದ ಜಾಗದಲ್ಲಿ ಸ್ಥಳ ಮಹಜರ್ ಮಾಡಿರುತ್ತಾರೆ. ಗುನ್ನಾ ಸ್ಥಳದಲ್ಲಿ ಬಿದಿದ್ದ ಹಲ್ಲೆಗೆ ಉಪಯೋಗಿಸಿದ ದೊಣ್ಣೆಯನ್ನು ಪೋಲೀಸರು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಮಹಜರ್ ಕಾಲದಲ್ಲಿ ಚೇತನ್ ಮತ್ತು ಜಯರಾಮೇಗೌಡ ಸಹ ಇದ್ದರು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ನಾಗರಾಜು ಹಾಗೂ ಲಕ್ಷ್ಮಿರವರನ್ನು ನೋಡಿ ಗುರುತಿಸಿರುತ್ತಾರೆ. ಹಲ್ಲೆಗೆ ಉಪಯೋಗಿಸಿದ ದೊಣ್ಣೆಯನ್ನು

ನೋಡಿದರೆ ಗುರುತಿಸುತ್ತೇನೆ.  ಸಾಕ್ಷಿಯು ದೊಣ್ಣೆಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾಲು.1 ಎಂದು ಗುರುತಿಸಲಾಯಿತು.

ಸಾಕ್ಷಿಯು ತಾನು ನೀಡಿದ್ದ ದೂರನ್ನು ನೋಡಿ ಗುರುತಿಸಿದ್ದು ಅದರಲ್ಲಿ ತಾನು ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿರುವುದಾಗಿ ನೋಡಿ ಗುರುತಿಸಿರುತ್ತಾರೆ.  ದೂರನ್ನು ನಿಪಿ.1 ಎಂದು ಗುರುತಿಸಲಾಯಿತು.  ಸಾಕ್ಷಿಯು ಸ್ಥಳ ಮಹಜರ್ ನೋಡಿ ಗುರುತಿಸಿದ್ದು, ಅದರಲ್ಲಿ ತಾನು ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿರುವುದಾಗಿ ನೋಡಿ ಗುರುತಿಸಿರುತ್ತಾರೆ. ಮಹಜರ್ ಅನ್ನು ನಿಪಿ.2 ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲುಃ ಮಾನ್ಯ ಆರೋಪಿ ಪರ ವಕೀಲರಿಂದ</u>**

ನಾವು ಮೂರು ಜನ ಅಣ್ಣತಮ್ಮಂದಿರು,ನನಗೆ ಒಬ್ಬಳು ಸಹೋದರಿ ಇರುತ್ತಾರೆ.  ಆರೋಪಿ ನಾಗರಾಜು ನನ್ನ ತಮ್ಮ ಎಂದರೆ ನಿಜ.  ನನ್ನ ತಮ್ಮ ನಾಗರಾಜುವಿಗೂ ಹಾಗೂ ನನ್ನಗೂ ಜಮೀನಿನ ವಿಚಾರಕ್ಕೆ ಹೊಂದಾಣಿಕೆ ಇಲ್ಲ ಎಂದರೆ ಸರಿ.  ನನ್ನ ತಂಗಿ ದೇವಮ್ಮ ಆಸ್ತಿಗಳಲ್ಲಿ ಹಿಸ್ಸೆ ಕೋರಿ ನಾನು ಮತ್ತು ನನ್ನ ಸಹೋದರರ ಮೇಲೆ ಭಾಗಾಂಶದ ದಾವೆ ಸಲ್ಲಿಸಿದ್ದಾರೆ ಎಂದರೆ ನಿಜ.  ಸದರಿ ದಾವೆಯಲ್ಲಿ ನನ್ನಗೂ ಹಿಸ್ಸೆ ಇದೆ ಎಂದು ಸಾಕ್ಷಿ ನುಡಿದಿದ್ದೇನೆ ಎಂದರೆ ನಿಜ.  ನನ್ನ ತಂದೆ ತೀರಿ ಹೋದ ಮೇಲೆ ನಾವು ಅಣ್ಣ ತಮ್ಮಂದಿರು ಜಮೀನುಗಳಲ್ಲಿ ವಿಭಾಗವಾಗದೇ ಸ್ವಾಧೀನಾನುಭವದಲ್ಲಿ ಇರುತ್ತೇವೆ.  ನಾನು ಮತ್ತು ನನ್ನ ಅಣ್ಣ ತಮ್ಮಂದಿರು ಬೇರೆ ಬೇರೆ ವಾಸವಿದ್ದೇವೆ ಎಂದರೆ ನಿಜ.  ಆರೋಪಿ ನಾಗರಾಜು ಇರುವ ಮನೆ ಚಿಕ್ಕದಿದ್ದು, ಮಕ್ಕಳು ಮದುವೆಗೆ ಬಂದಿರುವ ಕಾರಣ ದೊಡ್ಡ ಮನೆ ಕಟ್ಟಿಸುವ ಸಲುವಾಗಿ ಸ.ನಂ.11/2 ರಲ್ಲಿ ಮನೆ ಕಟ್ಟಲು ಪ್ರಯತ್ನಿಸಿದರು ಎಂದರೆ ನಿಜ.  ನನ್ನ ತಮ್ಮ ಕೃಷ್ಣೇಗೌಡ ಆತನಿಗೆ ಬಂದಂತಹ ಸ್ವತ್ತನ್ನು ಕ್ರಯ ಪತ್ರದ ಮುಖೇನ ನಾಗರಾಜು ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು.

ಗಲಾಟೆ ನಡೆಯಿತು ಎನ್ನುವ ಜಾಗದಲ್ಲಿ ನಮ್ಮ ಗ್ರಾಮದ ಸುಮಾರು 10-12 ಜನ ವ್ಯಕ್ತಿಗಳು ಇದ್ದರು.  ಸದರಿ ಜಾಗದಲ್ಲಿ ಶಂಕರಯ್ಯ, ಸಿದ್ದರಾಜು ಹೊರತುಪಡಿಸಿ ಇದ್ದ ಬೇರೆ ಜನರ ಹೆಸರು ನನಗೆ ಗೊತ್ತಿದೆ.  ಅವರುಗಳು ಯಾರೆಂದರೆ ಸಿದ್ದೇಗೌಡನ ಮಗ ಸಿದ್ದು, ಪಟೇಲ ಮಗ ಸುರೇಶ್ ರವರ ಹೆಸರು ಗೊತ್ತಿದೆ.  ಮಿಕ್ಕವರ ಹೆಸರು ಹೇಳಲಾಗುವುದಿಲ್ಲ.

ನಿಪಿ.1 ದೂರನ್ನು ಅರಕೆರೆಯ ಕುಮಾರ್ ಎಂಬುವವರು ಬರೆದಿರುತ್ತಾರೆ.  ನನ್ನ ದೂರಿನಲ್ಲಿ ಮೇಲೆ ತಿಳಿಸಿದ ವ್ಯಕ್ತಿಗಳ ಹೆಸರನ್ನು ಬರೆಯಲು ಕುಮಾರ್ ಗೆ ತಿಳಿಸಿರುತ್ತೇನೆ.

ಆಸ್ಪತ್ರೆಯಲ್ಲಿ ವೈದ್ಯರಿಗೆ ನನಗೆ ಇಂತಹ ವ್ಯಕ್ತಿಗಳೇ ಹೊಡೆದಿದ್ದಾರೆಂದು ಮತ್ತು ಯಾವ ಆಯುಧದಿಂದ ಹೊಡೆದರು ಎಂದು ತಿಳಿಸಿರುತ್ತೇನೆ.  ದೂರಿನಲ್ಲಿ ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದ ಬಗ್ಗೆ ತಿಳಿಸಿಲ್ಲ.

ಮರುದಿನ ಪೋಲೀಸರು ಮಹಜರ್ ಮಾಡಲು ಬಂದಾಗ ಚೇತನ್ ಹಾಗೂ ಜಯರಾಂ ಹೊರತು ಪಡಿಸಿ ನಾನು ಮಾತ್ರ ಇದ್ದೆ.  ಪೋಲೀಸರು ಮಹಜರ್ ಮಾಡಲು ಬಂದಿದ್ದಾರೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ದೂರು ನೀಡಲು ಹೋಗಿದ್ದು ಬಿಟ್ಟರೆ ಮತ್ತೆ ಘಟನೆಯ ವಿಚಾರವಾಗಿ ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ.  ಸಾಕ್ಷಿಗೆ ದಿಃ 03.02.2018 ರಂದು ಪೋಲೀಸರ ಮುಂದೆ ನುಡಿದಿದ್ದಾರೆ ಎನ್ನಲಾದ ಮರುಹೇಳಿಕೆಯನ್ನು ಓದಿ ಹೇಳಿದ್ದು ಅದರಲ್ಲಿ ಗಲಾಟೆ ಸಮಯದಲ್ಲಿ ನನ್ನ ತಮ್ಮನ ಮಕ್ಕಳಾದ ಕುಮಾರ್ ಹಾಗೂ ಮಹೇಶ್ ರವರು ಇರಲಿಲ್ಲ ನಾನು ದೂರನ್ನು ಹೇಳಿ ಬರೆಸುವಾಗ ನನ್ನ ತಮ್ಮನ ಮಕ್ಕಳ ಹೆಸರನ್ನು ಬಾಯಿ ತಪ್ಪಿನಿಂದ ಹೇಳಿ ಬರೆಸಿರುತ್ತೇನೆ ಎಂದು ಹೇಳಿಕೆ ನೀಡಿರುವುದಿಲ್ಲ.  ಸಾಕ್ಷ್ಯ ಮರುಹೇಳಿಕೆಯನ್ನು ನಿಡಿ.1. ಎಂದು ಗುರುತಿಸಲಾಯಿತು.

ಈ ಕೇಸು ದಾಖಲಾದ ನಂತರ ದೇವಮ್ಮ ರವರು ಅಸಲು ದಾವಾ.56/2019 ದಾವೆಯನ್ನು ಭಾಗಾಂಶ ಕೋರಿ ಸಲ್ಲಿಸಿದ್ದಾರೆ ಎಂದರೆ ನಿಜ.

ನಾನು ಹೇಳಿದಂತೆ ಆರೋಪಿತರು ಯಾವುದೇ ಗಲಾಟೆಯನ್ನು ನನ್ನ ಮೇಲೆ ಮಾಡಿಲ್ಲ ನಾನು ಸ್ಕೂಟರ್ ನಲ್ಲಿ ನನ್ನ ಮಗನ ಜೊತೆ ಹೋಗುವಾಗ ಬಿದ್ದು ಗಾಯ ಮಾಡಿಕೊಂಡಿದ್ದು ಅದನ್ನು ದುರುಪಯೋಗ ಪಡಿಸಿಕೊಂಡು ಆರೋಪಿತರ ಮತ್ತು ನಮ್ಮ ಮಧ್ಯೆ ಜಮೀನಿನ ವಿಚಾರವಾಗಿ ಮನಸ್ತಾಪ ಇರುವ ಕಾರಣ ಅವರಿಗೆ ತೊಂದರೆ ನೀಡುವ ಸಲುವಾಗಿ ದುರುದ್ದೇಶದಿಂದ ನಿಪಿ.1 ದೂರನ್ನು ನೀಡಿದ್ದೇನೆ ಹಾಗೂ ಆರೋಪಿತರು ಮು.ಮಾಲು.1 ರಿಂದ ಹಲ್ಲೆ ಮಾಡಿದ್ದಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾಲು.1 ಅನ್ನು ಹಲ್ಲೆ ಮಾಡಲು ಉಪಯೋಗಿಸಿದ ಬಗ್ಗೆ ನಿರ್ದಿಷ್ಟ ಗುರುತು ಇರುತ್ತದೆ. ಮು.ಮಾಲು.1 ರ ತರಹದ ದೊಣ್ಣೆಗಳು ಸಿಗುತ್ತವೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.